5. ಪ್ರಕಟಣೆ:

ವಿಷಯ: ಸದನದ ಕಾರ್ಯಕಲಾಪಗಳ ಸಮಿತಿ ವರದಿ.

ಈ ದಿನ ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಈ ಕೆಳಕಂಡ ತೀರ್ಮಾನಗಳನ್ನು ಕೈಗೊಳ್ಳಲಾಗಿದೆ.

ದಿನಾಂಕ 7.3.2011, 8.3.2011 ಮತ್ತು 9.3.2011ರಂದು ಬೆಳಿಗ್ಗೆ 10 ಗಂಟೆಗೆ ಸದನವು ಸಭೆ ಸೇರುವುದು. ದಿನಾಂಕ 9.3.2011ರಂದು ಸನ್ಮಾನ್ಯ ಮುಖ್ಯಮಂತ್ರಿಗಳು ಬೆಳಿಗ್ಗೆ 10 ಗಂಟೆಗೆ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆಗೆ ಉತ್ತರ ನೀಡಲಿದ್ದಾರೆ.

ದಿನಾಂಕ 10.3.2011 ಮತ್ತು 11.3.2011ರಂದು ಕಾರ್ಯಕಲಾಪಗಳು ಇರುವುದಿಲ್ಲ. ದಿನಾಂಕ 14.3.2011ರಿಂದ 17.3.2011ರವರೆಗೆ ಕಾರ್ಯ ಕಲಾಪಗಳನ್ನು ಮುಂದುವರೆಸಲಾಗುವುದು.

ಈಗ ಸದನವನ್ನು ಸೋಮವಾರ ಬೆಳಿಗ್ಗೆ 10 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವನ್ನು ದಿನಾಂಕ: 7ನೇ ಮಾರ್ಚ್ 2011ರಂದು ಸೋಮವಾರ ಬೆಳಿಗ್ಗೆ 10 ಗಂಟೆಗೆ ಸೇರುವಂತೆ ಮಧ್ಯಾಹ್ನ 4 ಗಂಟೆ 21 ನಿಮಿಷಗಳಿಗೆ ಮುಂದೂಡಲಾಯಿತು)

ದಿನಾಂಕ: 4.3.2011ರ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು

ಅನುಬಂಧ–1

ವಿಷಯ: ಸಿ.ಆರ್.ಎಫ್. ಯೋಜನೆಯಡಿ ಹಂಚಿಕೆಯಾದ ಅನುದಾನ

235 (434) ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?